ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ

*****************************************************************************************

ಸಂಖ್ಯೆ: ಸಶಿಅ/ಹೆಮ.ಶಿ/ಸುತ್ತೋಲೆ/ಜ್ಞಾಪನಾ/2013–14 ದಿನಾಂಕ: 10–06–2014

# ತಿದ್ದುಪಡಿ ಸುತ್ತೋಲೆ

ವಿಷಯ: 2014–15 ನೇ ಸಾಲಿನ ಕೆಜಿಬಿವಿ ಸುತ್ತೋಲೆಯಲ್ಲಿ ತಿದ್ದುಪಡಿ ಮಾಡಿದ ಅಂಶಗಳ ಕುರಿತು.

ಉಲ್ಲೇಖ: ಈ ಕಛೇರಿಯ ಮಾರ್ಗಸೂಚಿ ಮತ್ತು ಆಹಾರ ಪೂರೈಕೆಯ ಪತ್ರಗಳನ್ವಯ,
ಸಮ ಸಂಖ್ಯೆ:ಸಶಿಅ/ಹೆ.ಮ.ಶಿ/ಸುತ್ತೋಲೆ/ಜ್ಞಾಪನ/2014–15, ದಿನಾಂಕ: 29.05.2014

***********

ಉಲ್ಲೇಖಿತ ಪತ್ರದನ್ವಯ ಮಾರ್ಗಸೂಚಿಯಲ್ಲಿ ಸೂಚಿಸಲಾಗಿದ್ದ ಅಂಶಗಳಲ್ಲಿ ಕೆಲವೊಂದು ತಿದ್ದುಪಡಿ ಮಾಡಲಾಗಿದ್ದು, ಅದರಂತೆ ಕ್ರಮವಹಿಸಲು ತಿಳಿಸಿದೆ.

## ತಿದ್ದುಪಡಿ ಮಾಡಲಾದ ಅಂಶಗಳು

| ಕ್ರ.ಸಂ | ಸುತ್ತೋಲೆಯಲ್ಲಿರುವ ಅಂಶಗಳು | ತಿದ್ದುಪಡಿ ಮಾಡಲಾದ ಅಂಶಗಳು |
|---|---|---|
| 1 | ಆಹಾರ ಪೂರೈಕೆ ಏಜೆನ್ಸಿಯ ಆಯ್ಕೆಗಾಗಿ 15 ದಿನಗಳ ಅವಧಿಯ ಮುಕ್ತ ಅಲ್ಪಾವಧಿ ಟೆಂಡರ್‌ನ್ನು ಕರೆಯಲು ತಿಳಿಸಲಾಗಿರುತ್ತದೆ. | ಆಹಾರ ಪೂರೈಕೆಗಾಗಿ ಏಜೆನ್ಸಿಯವರನ್ನು **ಮುಕ್ತ ಅಲ್ಪಾವಧಿ ಇ–ಟೆಂಡರ್ ಪ್ರಕ್ರಿಯೆಯ ಮೂಲಕ ಕಾರ್ಯಗತಗೊಳಿಸಬೇಕೆಂದು ತಿಳಿಸಲಾಗಿದೆ.** |
| 2 | **ಸಾಮರ್ಥ್ಯ ಅಭಿವೃದ್ಧಿ ಚಟುವಟಿಕೆಯಡಿಯಲ್ಲಿ** ಶಿಕ್ಷಕರ, ವಾರ್ಡನ ಮತ್ತು ವಸತಿನಿಲಯಗಳ ಸಿಬ್ಬಂದಿಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿಗೆ ಈ ಹಣವನ್ನು ಬಳಕೆ ಮಾಡುವುದು ಎಂದು ತಿಳಿಸಲಾಗಿತ್ತು. | **ಸಾಮರ್ಥ್ಯ ಅಭಿವೃದ್ಧಿಗೆ ನಿಗಸಿಪಡಿಸಿದ ಮೊತ್ತವನ್ನು ವಿದ್ಯಾರ್ಥಿಗಳ ಸಾಮರ್ಥ್ಯ ಅಭಿವೃದ್ಧಿಗೆ ಮಾತ್ರ ಬಳಸುವುದು.**<br>ಈ ಕೆಳಕಂಡ ಅಂಶಗಳಲ್ಲಿ ಯಾವುದಾದರೂ ಮೂರು ಅಂಶಗಳನ್ನು ಮಾತ್ರ ಕಡ್ಡಾಯವಾಗಿ ಆಯ್ಕೆ ಮಾಡಿಕೊಳ್ಳುವುದು. (ಮೂರು ತಿಂಗಳ ಅವಧಿಗೆ ನಿಗದಿಪಡಿಸುವುದು)<br>1. ಜೀವನ ಕೌಶಲ್ಯಗಳ ಹಾಗೂ ಪ್ರಮುಖವಾದ ವಿಚಾರಗಳ ಬಗ್ಗೆ ಅರಿವನ್ನು ಮೂಡಿಸಲು ಶಿಬಿರಗಳನ್ನು ಏರ್ಪಾಡು ಮಾಡಲು ಈ ಅನುದಾನದ ಬಳಕೆ ಮಾಡಬಹುದಾಗಿದೆ.<br>2. ಮೊಫೆಡ್ ಸವಾರಿ ಕಲಿಕೆ (ಶಾಲೆ ಆವರಣದಲ್ಲಿ ಮಾತ್ರ ಕಲಿಸಿ) ; ಸಂಗೀತ ಕಲಿಕೆ ; ಸ್ಥಳೀಯ NIIT ಯಂತಹ ಸಂಸ್ಥೆಗಳ ಸಹಯೋಗ ಸಾಧಿಸಿ ಗಣಕ ಶಿಕ್ಷಣದಲ್ಲಿ ವಿವಿಧ ಕೋರ್ಸುಗಳನ್ನು ಕಲಿಯಲು ಅವಕಾಶ ನೀಡುವುದು ; ಕನ್ನಡ ; ಹಿಂದಿ ; ಇಂಗ್ಲೀಷ ಕಲಿಕೆ (Spoken English Course)ಸಂಸ್ಕೃತ ಪರೀಕ್ಷೆಗೆ ಕೂರಲು ವ್ಯವಸ್ಥೆ ಮಾಡುವುದು; ಈಜು ಕಲಿಕೆ ; ವ್ಯಕ್ತಿತ್ವ ಬೆಳವಣಿಗೆ ತರಬೇತಿ (ಮಂಗಳೂರಿನ ಅಭಿಯಾನಂ ಸಂಸ್ಥೆಯಂತಹ ಸಂಸ್ಥೆಗಳ ಸಹಯೋಗದಿಂದ |

| | | |
|---|---|---|
| | | ಸಾಧಿಸಬಹುದು) ;ನಾಟಕಾಭ್ಯಾಸ ; ನೃತ್ಯಾಭ್ಯಾಸ ಇತ್ಯಾದಿಗಳಿಗೆ ಅನುದಾನದ ಬಳಕೆ ಮಾಡಬಹುದಾಗಿದೆ.<br>3. 100 ಮಕ್ಕಳಿಗೆ ಒಂದೇ ಕಾರ್ಯಕ್ರಮ ನಡೆಸುವುದು ಯುಕ್ತವೆನಿಸದು. ಮಕ್ಕಳ ಆಯ್ಕೆಗೆ/ಐಚ್ಛಿಕ ಅಂಶಕ್ಕೆ ಅವಕಾಶ ಕಲ್ಪಿಸಿ. ತರಬೇತಿ ನೀಡುವ ಶಿಕ್ಷಕರಿಗೆ ಗೌರವಧನ ಸಂಬಂಧಿಸಿದ ವಸ್ತುಗಳ ಖರೀದಿಗೆ ಅವಕಾಶವಿದೆ. ಇವರಿಗೆ ಮಾಹೆಯಾನ ರೂ. 3,000/–ಸಂಭಾವನೆಯನ್ನು ನೀಡಬಹುದಾಗಿದೆ. |

ಶಿಕ್ಷಕರ, ವಾರ್ಡ್‌ನ ಮತ್ತು ವಸತಿನಿಲಯಗಳ ಸಿಬ್ಬಂದಿಗಳಿಗೆ ನೀಡುವ ತರಬೇತಿಗೆ ವಿದ್ಯಾರ್ಥಿಗಳ ಸಾಮರ್ಥ್ಯ ಅಭಿವೃದ್ಧಿಗೆ ಮಂಜೂರಾದ ಅನುದಾನವನ್ನು ಬಳಕೆ ಮಾಡಬಾರದು.

(ಉಳಿದಂತೆ ಉಲ್ಲೇಖಿತ ಸುತ್ತೋಲೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ)

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ
ಬೆಂಗಳೂರು

ಮುಂದಿನ ಕ್ರಮಕ್ಕಾಗಿ:

1. ಸಂಬಂಧಿಸಿದ ಡಿ.ಡಿ.ಪಿ.ಐ.(ಆ),ರವರ ಮೂಲಕ ಡಯಟ್ ಪ್ರಾಂಶುಪಾಲರು, ಡಿ.ವೈ.ಪಿ.ಸಿ., ಬಿ.ಇ.ಓ, ಬಿ.ಆರ್.ಸಿ.ಗಳು ಮತ್ತು ಕೆ.ಜಿ.ಬಿ.ವಿ. ಮುಖ್ಯಶಿಕ್ಷಕರಿಗೆ.
2. ರಾಜ್ಯ ಕಾರ್ಯಕ್ರಮ ನಿರ್ದೇಶಕರು, ಮಹಿಳಾ ಸಮಖ್ಯಾ, # 367,11ನೇ ಕ್ರಾಸ್, 2ನೇ ಬ್ಲಾಕ್, 4ನೇ ಮೇನ್, ಆರ್.ಟಿ.ನಗರ, ಬೆಂಗಳೂರು – 560032.

ಇವರಿಗೆ ಮಾಹಿತಿಗೆ ಸಲ್ಲಿಸಿದೆ:

1. ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ), ಬೆಂಗಳೂರು ರವರ ಆಪ್ತ ಶಾಖೆಗೆ ಮಾನ್ಯರ ಅವಗಾಹನೆಗೆ ತರಲು ಕೋರುತ್ತಾ.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರ ಆಪ್ತ ಶಾಖೆಗೆ ಮಾನ್ಯರ ಅವಗಾಹನೆಗೆ ತರಲು ಕೋರುತ್ತಾ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ.
4. ಸಂಬಂಧಿಸಿದ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
5. ಈ ಕಛೇರಿಯ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ